ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಸಂತಾಪ

ಪತ್ರಿಕೆಯ ಹೆಸರು : NAME OF THE NEWS PAPER: ಪ್ರಜಾವಾಣಿ    ದಿನಾಂಕ : DATE: 15/2/2020

# ಕವಿ ವಿಡಂಬಾರಿ ನಿಧನ

ಹೊನ್ನಾವರ: 'ವಿಡಂಬಾರಿ' ಕಾವ್ಯ-ನಾಮದಲ್ಲಿ ಗುರುತಿಸಿಕೊಂಡಿದ್ದ ಚುಟುಕು ಕವಿ ವಿಷ್ಣು ಜಿ.ಭಂಡಾರಿ (84) ಕಡತೋಕಾದ ತಮ್ಮ ಮಗಳ ಮನೆಯಲ್ಲಿ ಗುರುವಾರ ರಾತ್ರಿ ನಿಧನರಾದರು.



ಅವರಿಗೆ ಮಗಳು ಹಾಗೂ ಅಳಿಯ ಇದ್ದಾರೆ. ದಿನಕರ ದೇಸಾಯಿ ಅವರ ಚುಟುಕು ಕವಿತೆಗಳ ಪ್ರಭಾವಕ್ಕೆ ಒಳಗಾಗಿದ್ದ ವಿಡಂಬಾರಿ, ಚುಟುಕು ಕವಿಯಾಗಿ ಪ್ರಸಿದ್ಧರಾಗಿದ್ದರು. ಬಂಡಾಯದ ದನಿಯುಳ್ಳ ತಮ್ಮ ಚುಟುಕಿನ ಮೂಲಕ ಸಮಾಜದ ಅನಿಷ್ಟಗಳನ್ನು ವಿಡಂಬನೆ ಮಾಡುತ್ತಿದ್ದರು.

1935ರಲ್ಲಿ ಇಡಗುಂಜಿಯಲ್ಲಿ ದೇವದಾಸಿಯ ಮಗನಾಗಿ ಜನಿಸಿದ ವಿಷ್ಣು ಭಂಡಾರಿ, ಮುಂದೆ ಅಂಚೆ ಇಲಾಖೆಯಲ್ಲಿ ಪೇದೆಯಾಗಿ ಬಹುಕಾಲ ವೃತ್ತಿಯಲ್ಲಿದ್ದರು. ನಿವೃತ್ತಿಯ ನಂತರ ಸಾಹಿತ್ಯ ಕೃಷಿಯ ಜೊತೆಗೆ ಪುಸ್ತಕ ಹಂಚುವ ಕಾಯಕದಲ್ಲಿ ತೊಡಗಿಕೊಂಡಿದ್ದರು ಅವರ ಏಳು ಪುಸ್ತಕಗಳು ಪ್ರಕಟವಾಗಿವೆ.

'ರಾಜ್ಯೋತ್ಸವ ಪ್ರಶಸ್ತಿ' ಪುರಸ್ಕೃತರಾಗಿದ್ದ ವಿಡಂಬಾರಿ, ಉತ್ತರ ಕನ್ನಡ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಗೌರವಕ್ಕೂ ಪಾತ್ರ-ರಾಗಿದ್ದರು. ಅವರ ಆಶಯದಂತೆ ದೇಹವನ್ನು ಕಾರವಾರದ ಸರ್ಕಾರಿ ವೈದ್ಯಕೀಯ ಕಾಲೇಜಿಗೆ ದಾನ ಮಾಡಲಾಯಿತು.

16